# ಉದರ ವೈರಾಗ್ಯವಿದೂ ನಮ್ಮ ಪದುಮನಾಭನಲಿ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
4. **Note:** The wordings given without highlights are as per Ref. 2. The wordings of Ref. 3 are similar to Ref. 2. The wordings in Ref. 1 are slightly different and these differences are given in green highlights.

ರಾಗ: ಪಂತುವರಾಳಿ ತಾಳ: ಆದಿ

ಉದರ ವೈರಾಗ್ಯವಿದು
ನಮ್ಮ ಪದುಮನಾಭನಲಿ ಲೇಶ ಭಕುತಿಯಿಲ್ಲ ॥ ಪ ॥

ಉದಯ ಕಾಲದಲೆದ್ದು ಗಡಗಡ ನಡುಗುತ
ನದಿಯಲಿ ಮಿಂದೆನೆಂದು ಹಿಗ್ಗುತಲಿ
ಮದ, ಮತ್ಸರ ಕ್ರೋಧ ಒಳಗೆ ತುಂಬಿಟ್ಟುಕೊಂಡು
ಬದಿಯಲಿದ್ದವರಿಗಾಶ್ಚರ್ಯವ (ತೋರುವುದು) (ದೋರುವುದು) ॥ 1 ॥

ಕಂಚುಗಾರನ ಬಿಡಾರದಂದದಿ
ಕಂಚು ಹಿತ್ತಾಳೆ ಪ್ರತಿಮೆಯ ನೆರಹಿ
ಮಿಂಚ ಬೇಕೆನುತ ಜ್ಯೋತಿಗಳನು ಹಚ್ಚಿ
ವಂಚನೆಯಿಂದಲಿ ಪೂಜೆಯ ಮಾಡುವುದು ॥ 2 ॥
(ಮಿಂಚ ಬೇಕೆಂದು ಬಹು ಜ್ಯೋತಿಗಳನೆ ಹಚ್ಚಿ
ವಂಚಕತನದಲಿ ಪೂಜೆಯ ಮಾಳ್ಪುದು)

ಕರದಲಿ ಜಪಮಣಿ, ಬಾಯಲಿ ಮಂತ್ರವು

ಅರಿವೆಯ ಮುಸುಕು ಮೋರೆಗೆ ಹಾಕಿ
ಪರ ಸತಿಯರ (ಗುಣ ಮನದಲಿ ಸ್ಮರಿಸುತ) (ರೂಪ ಮನದಲಿ ಗುಣಿಸುತ)
ಪರಮ ವೈರಾಗ್ಯಶಾಲಿ (ಎಂದೆನಿಸುವುದು) (ಯೆನಿಸುವುದು) ॥ 3 ॥

ಬೂಟಕತನದಲಿ ಬಹಳ ಭಕುತಿ ಮಾಡಿ
(ದಿಟನೀತ ಸರಿಯಾರಿಲ್ಲೆನಿಸಿ) (ಸಾಟಿಯಿಲ್ಲವು ಎನಗೆಂದೆನಿಸಿ)
ನಾಟಕ ಸ್ತ್ರೀಯಂತೆ ಬಯಲ ಢಂಭವ ತೋರಿ
ಊಟದ ಮಾರ್ಗದ ಜ್ಞಾನವಿಲ್ಲದೆ ॥ 4 ॥
(ಊಟಕೆ ಸಾಧನ ಮಾಡಿಕೊಂಬುದಿದು)

| | |
|---|---|
| ನಾನು ಎಂಬುದ ಬಿಟ್ಟು ಜ್ಞಾನಿಗಳೊಡನಾಡಿ | ನಾನು ಎಂಬುದ ಬಿಟ್ಟು ಜ್ಞಾನಿಗಳೊಡಗೂಡಿ |
| ಏನಾದರು ಹರಿ ಪ್ರೇರಣೆ ಎಂದು | ಏನಾದುದು ಹರಿ ಪ್ರೇರಣೆಯೆಂದು |
| ಧ್ಯಾನಿಸಿ ಮೌನದಿ ಪುರಂದರ ವಿಠಲನ | ಶ್ರೀನಿಧಿ ಪುರಂದರ ವಿಠ್ಠಲ ರಾಯನನು |
| ಕಾಣದೆ ಮಾಡಿದ ಕಾರ್ಯಗಳೆಲ್ಲವು ॥ 5 ॥ | ಕಾಣದೆ ಮಾಡಿದ ಕಾರ್ಯಗಳೆಲ್ಲವು |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು**:

**ಉದರ ವೈರಾಗ್ಯ** – ಹೊಟ್ಟೆಪಾಡಿಗಾಗಿ ವೈರಾಗ್ಯದ ಸೋಗು.

**ಕಂಚುಗಾರನ ಬಿಡಾರದಂದದಿ** – ಕಂಚು, ಹಿತ್ತಾಳೆ ಕೆಲಸಗಾರರು ತಾವು ಮಾಡಿ ಎರಕಹುಯ್ದ ಪೂಜಾ ಮೂರ್ತಿಗಳನ್ನು ಮಾರಾಟಕ್ಕೆಂದು ತಮ್ಮ ಮನೆಗಳಲ್ಲಿ ಸಾಲಾಗಿ ಜೋಡಿಸಿರುತ್ತಾರೆ. ಅವನ್ನು ಅವರೇನು ಪೂಜಿಸುವುದಿಲ್ಲ; ಅವುಗಳ ವಿಚಾರವಾಗಿ ಅವರಿಗೇನು ಭಕ್ತಿ ಇರದು. ಬೇರೆಯವರ ಸಲುವಾಗಿ ಅವುಗಳು ಅಷ್ಟೆ. ಕೆಲಸಗಾರರಿಗೆ ಬೇಕಾದುದು ಹಣ.

**ಬೂಟಕತನ** – ಬೂಟಾಟಿಕೆ, ವಂಚನೆ, ಸೋಗು.

**ನಾಟಕಸ್ತ್ರೀಯಂತೆ…** – ಹಿಂದಿನ ಕಾಲದಲ್ಲಿ ನಾಟಕಗಳಲ್ಲಿ ಸ್ತ್ರೀಪಾತ್ರ ಮಾಡುತ್ತಿದ್ದವರೆಲ್ಲ ಪುರುಷರು ತಾನೆ!

**ದಿಟನೀತ…** – 'ದಿಟನು (ಸತ್ಯವಾಗಿ ಧಾರ್ಮಿಕನು) ಈತ, ಇವನಿಗೆ ಸರಿ ಯಾರೂ ಇಲ್ಲ' ಎಂದು ಜನ ಬಗೆಯುವಂತೆ ಮಾಡಿ.

**ಏನಾದರು ಹರಿ ಪ್ರೇರಣೆ** – ಇದು 'ನಾಹಂ ಕರ್ತಾ ಹರಿಃ ಕರ್ತಾ' ಎನ್ನುವ ಮಾತಿನ ಛಾಯೆ.

**Classification:** Keerthane
**Ankita:** purandara vittala
**Location:** NA
**Category:** Jeevana Darshana
**Group Words:** udara, vairagya, beligge, padma, nadi, sittu, deepa, japa, bayyi, bayi, mantra, patni, jnana, oota, Krishna, Dhyana
**Pravachana:** NA
**Explanation:** NA